# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

## SC.177/2019

| | | |
|---|---|---|
| ಸಾಕ್ಷಿದಾರರ ಹೆಸರು | : | ಕೆ. ಎನ್. ಹಾಲಪ್ಪ |
| ತಂದೆಯ ಹೆಸರು | : | ಲೇಟ್ ನಾರಪ್ಪ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ನಿವೃತ್ತ ಎ.ಎಸ್.ಐ. |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 11

ಸಿ.ಡಬ್ಲ್ಯೂ 19

ದಿ: 29-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 2016-17 ರಲ್ಲಿ ಎ.ಎಸ್.ಐ. ಆಗಿ ಕೆ

2. ದಿಃ 13-06-2016 ರಂದು ಠಾಣೆಯಲ್ಲಿರುವಾಗ ಮಧ್ಯಾಹ್ನ 3.30 ಗಂಟೆಗೆ ದೂರುದಾರರು ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ನಂಬರ 156/2016 ರಂತೆ ನೊಂದಾಯಿಸಿ ಪ್ರ.ವ.ವರದಿಯನ್ನು ತಯಾರಿಸಿರುತ್ತೇನೆ. ದೂರನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ದೂರನ್ನು ಈಗಾಗಲೇ ನಿಪಿ-1 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಅಂತ ಗುರುತಿಸಲಾಯಿತು. ದೂರನ್ನು ದೂರುದಾರರ ಸಂಬಂಧಿಕರಾದ ಚಾಸಾ-11 ರವರು ಬರೆದುಕೊಟ್ಟಿದ್ದಾರೆ ಅಂತ ಗೊತ್ತಾಯಿತು. ಪ್ರ.ವ.ವರದಿಯನ್ನು ನಿಪಿ-11 ಅಂತ, ಸಾಕ್ಷಿ ಸಹಿಯನ್ನು ನಿಪಿ-

11(ಎ) ಅಂತ ಗುರುತಿಸಲಾಯಿತು. ಪ್ರ.ವ.ವರದಿನನ್ನು ಮೇಲಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೆನೆ.

3. ನಂತರ ಅದೇ ದಿನ ಸಂಜೆ ದಾವಣಗೆರೆ ಸಿ.ಜಿ. ಆಸ್ಪತ್ರೆಗೆ ಹೋಗಿ ಪಂಚರಾದ ಚಾಸಾ-4 ಮತ್ತು 5 ರವರನ್ನು ಕರೆಸಿಕೊಂಡು ಶವಗಾರರದಲ್ಲಿರುವ ಮೃತ ರಾಮಪ್ಪರವರ ಶವವನ್ನು ಇನಕ್ವೆಷ್ಟ ಮಾಡಿಸಿರುತ್ತೇನೆ. ಸಾಕ್ಷಿದಾರರಾದ ಚಾಸಾ-6 ಮತ್ತು 7 ರವರು ಹಾಜರಿದ್ದರು ಮತ್ತು ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೆನೆ. ಶವ ಪಂಚನಾಮೆಯನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೆನೆ. ಶವ ಪಂಚನಾಮೆಯನ್ನು ಈಗಾಗಲೇ ನಿಪಿ-7 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಅಂತ ಗುರುತಿಸಲಾಯಿತು. ಪಂಚರ ಅಭಿಪ್ರಾಯದ ಪ್ರಕಾರ ಜಾಗದ ವಿಚಾರದಲ್ಲಿ ಮಂಜಪ್ಪ ಮತತು ಗಂಗಮ್ಮ ಇವರಿಗೆ ಆಗಾಗ ಜಗಳವಾಗುತ್ತಿದ್ದು, ಜಗಳದಲ್ಲಿ ಮಂಜಮ್ಮ ಮತ್ತು ಗಂಗಮ್ಮರವರು ಮೃತ ರಾಮಪ್ಪರವರಿಗೆ ಅವಾಚ್ಯ ಶಬ್ದಗಳಿಗೆ ಬೈದಿದ್ದು ಮತ್ತು ಎಲ್ಲಿಗಾದರೂ ಹೋಗಿ ಸಾಯಿ ಅಂತ ಹೇಳಿದ್ದು, ಅದನ್ನು ಮೃತ ರಾಮಪ್ಪರವರು ಮನ ನೊಂದುಕೊಂಡು ಅದೇ ದಿನ ರಾತ್ರಿ ಯಾವುದೇ ವಿಷವನ್ನು ಸೇವನೆ ಮಾಡಿ ಮನೆಯಲ್ಲಿ ಒದ್ದಾಡುತ್ತಿರುವಾಗ ಮೃತನ ಹೆಂಡತಿ ಮತ್ತು ಮಗ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ ಅಂತ ತಿಳಿಸಿರುತ್ತಾರೆ. FSL ಗೆ ಕಳುಹಿಸಿಕೊಡಬೇಕು ಅಂತ ಅಭಿಪ್ರಾಯ ಇರುವುದರಿಂದ ಚಾಸಾ-18 ರವರಿಗೆ ಪಾಸಪೋರ್ಟ್‌ನ್ನು ನೀಡಿ ಶವವನ್ನು ವೈದ್ಯರಿಗೆ ಕಳುಹಿಸಿಕೊಟ್ಟಿರುತ್ತೇನೆ. ಈ ಶವ ಪಂಚನಾಮೆಯನ್ನು ಸಂಜೆ 5.00 ರಿಂದ 7.00 ಗಂಟೆಯವರೆಗೆ ಮಾಡಿರುತ್ತೇನೆ. ಆ ಕಾಲಕ್ಕೆ ಪೋಟೋ ತೆಗೆಸಿರುತ್ತೆನೆ. ಆ ಪೋಟೋವನ್ನು ಈಗ ನೋಡಿ ಗುರುತಿಸುತ್ತೆನೆ. ಅದನ್ನು ಈಗಾಗಲೇ ನಿಪಿ-2 ಅಂತ ಗುರುತಿಸಲಾಗಿದೆ. (ಸಾಕ್ಷಿದಾರರು ಕಡತವನ್ನು ನೋಡಿ ಸಾಕ್ಷಿ ನುಡಿದಿರುತ್ತಾರೆ.)

**<u>ಪಾಟೀ ಸವಾಲುಃ ಶ್ರೀಮತಿ ಕೆ.ಎನ್.ಯು., ವಕೀಲರಿಂದ ಆರೋಪಿತರ ಪರವಾಗಿ</u>**:

4. ಯಾವುದೇ ಘಟನೆ ನಡೆದಿಲ್ಲ ಪಿರ್ಯಾದಿದಾರರ ಮಾತು ಕೇಳಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೀರಿ ಅಂದರೆ ಸರಿಯಲ್ಲ. ಅದೇ ದಿನ ಸಿ.ಜಿ. ಆಸ್ಪತ್ರೆಗೆ ಭೇಟಿ ನೀಡಿಲ್ಲ, ಅಲ್ಲಿ ಚಾಸಾ-4 ಮತ್ತು 5 ರವರ ಸಮಕ್ಷಮ ಪಂಚನಾಮೆ ಮಾಡಿಲ್ಲ, ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ. ರಾಮಪ್ಪರವರು ತಮ್ಮ ವೈಯಕ್ತಿಕ ಕಾರಣದಿಂದ ತೀರಿಕೊಂಡಿದ್ದಾರೆ ಅಂದರೆ ಸುಳ್ಳು. ನಿಪಿ-2 ರ ಪೋಟೋವನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದು ಇರುತ್ತದೆ ಅಂದರೆ ಸರಿಯಲ್ಲ. ಪಾಸಪೊರ್ಟ ಪಡೆದುಕೊಂಡು ಚಾಸಾ-18 ರವರ ಮೂಲಕ ಶವವನ್ನು ವೈದ್ಯರಿಗೆ ಕಳುಹಿಸಿಕೊಟ್ಟಿದ್ದು ಸುಳ್ಳು ಅಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.